# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 508
ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11-03-2025.
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು

| ಕ್ರ.ಸಂ | ಕೇಳಲಾದ ಪ್ರಶ್ನೆ | ಸಲ್ಲಿಸಿದ ಮಾಹಿತಿ |
|---|---|---|
| (ಅ) | ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ ವಸತಿ ಪ್ರದೇಶದಲ್ಲಿ (Residential Zone) 40 ಅಡಿ ವಿಸ್ತೀರ್ಣಕ್ಕಿಂತ ಹೆಚ್ಚು ರಸ್ತೆ ಲಭ್ಯವಿದ್ದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಅವಕಾಶವಿದೆಯೇ; | ಮಹಾನಗರ ಪಾಲಿಕೆ ವ್ಯಾಪ್ತಿಯ ವಸತಿ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡಕ್ಕೆ ಅನುಮತಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| (ಆ) | ಇದಲ್ಲಿ, ವಸತಿ ಪ್ರದೇಶದಲ್ಲಿ (Residential Zone) ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಅನುಸರಿಸಬೇಕಾದ ಮಾನದಂಡಗಳೇನು; (ಮಾಹಿತಿ ನೀಡುವುದು) | ವಸತಿ ವಲಯದಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಯಾವುದೇ ಮಾನದಂಡಗಳಿರುವುದಿಲ್ಲ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ.14(ಎ)ರನ್ವಯ ಕ್ರಮ ಜರುಗಿಸಿ, ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಆದೇಶ ಪಡೆದ ನಂತರ, ಸದರಿ ವಲಯವನ್ನು ವಾಣಿಜ್ಯ ವಲಯವನ್ನಾಗಿ ಪರಿಗಣಿಸಲಾಗುತ್ತದೆ.<br><br>ಭೂ ಉಪಯೋಗ ಬದಲಾವಣೆ ನಂತರ ವಾಣಿಜ್ಯ ವಲಯದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಅನುಮತಿಸಲಾಗುವುದು. |
| (ಇ) | ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 20ನೇ ವಾರ್ಡ್ ಸೇರಿದಂತೆ ವಸತಿ ಪ್ರದೇಶದಲ್ಲಿ (Residential Zone) ವಾಣಿಜ್ಯ ಕಟ್ಟಡ ನಿರ್ಮಾಣ, ಕಟ್ಟಡಗಳ ಸಂಖ್ಯೆ ಹಾಗೂ ವಿಸ್ತೀರ್ಣ ಎಷ್ಟು; | ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 20ನೇ ವಾರ್ಡ್ ಸೇರಿದಂತೆ ವಸತಿ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಪರವಾನಿಗೆ ನೀಡಲಾಗಿದೆ. ವಸತಿ ವಲಯದಲ್ಲಿ ಯಾವುದೇ ವಾಣಿಜ್ಯ ಕಟ್ಟಡಕ್ಕೆ ಪಾಲಿಕೆಯಿಂದ ಅನುಮತಿ ನೀಡಿರುವುದಿಲ್ಲ. |
| (ಈ) | ವಸತಿ ಪ್ರದೇಶದಲ್ಲಿ (Residential Zone) 40 ಅಡಿ ವಿಸ್ತೀರ್ಣಕ್ಕಿಂತ ಹೆಚ್ಚು ರಸ್ತೆಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು ಅವಕಾಶ ಇಲ್ಲದಿದ್ದಲ್ಲಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಳ್ಳಾರಿ ಮಹಾನಗರಪಾಲಿಕೆಯಿಂದ ವಸತಿ ವಲಯದಲ್ಲಿ ವಾಣಿಜ್ಯ ಕಟ್ಟಡಕ್ಕೆ ಅನುಮತಿ ನೀಡದೇ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ. |
| (ಉ) | ಬಂದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? (ಮಾಹಿತಿ ಒದಗಿಸುವುದು) | ಉದ್ಭವಿಸುವುದಿಲ್ಲ. |

**ನಅಇ 12 ಎಬಿಸಿ 2025(ಇ)**

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ
ನಗರ ಯೋಜನೆ ಸಚಿವರು.